ಪ್ರಧಾನ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಹುಮನಾಬಾದ.

ಪಿ.ಸಿ. ನಂ.24/2025
ಸಿ.ಡಬ್ಲ್ಯೂ-2

| | | |
|---|---|---|
| ಸಾಕ್ಷಿಯ ಹೆಸರು | - | ಬಾಬುರಾವ |
| ತಂದೆಯ ಹೆಸರು | - | ಹಣಮಂತಪ್ಪ |
| ವಯಸ್ಸು | - | 66 ವರ್ಷ |
| ಉದ್ಯೋಗ | - | ಕೂಲಿಕೆಲಸ. |
| ವಾಸ | - | ದುಬಲಗುಂಡಿ. |

ದಿನಾಂಕಃ 28-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಪಿರ್ಯಾದಿ ಪರ ಶ್ರೀ.ಕೆ.ವಿ.ಪಿ. ವಕೀಲರಿಂದಃ

ಸುರೇಖಾ ರವರು ಪರಿಚಯ ಇರುತ್ತಾರೆ. ಆರೋಪಿತರೆಲ್ಲರೂ ಪರಿಚಯ ಇರುತ್ತಾರೆ. 1 ನೇ ಆರೋಪಿ ಪಿರ್ಯಾದಿದಾರನ ಗಂಡನಾಗಿರುತ್ತಾನೆ. 2 ನೇ ಆರೋಪಿತಳು 1 ನೇ ಆರೋಪಿಯ 2 ನೇ ಹೆಂಡತಿಯಾಗಿರುತ್ತಾಳೆ. 3, 5 & 7 ನೇ ಆರೋಪಿತರು 1 ನೇ ಆರೋಪಿಯ ಅಣ್ಣಂದಿರಗಳು. 4, 6 & 8 ನೇ ಆರೋಪಿತರು 1 ನೇ ಆರೋಪಿಯ ಅತ್ತಿಗೆಯಂದಿರರು. 9 & 10 ನೇ ಆರೋಪಿತರು 1 ನೇ ಆರೋಪಿತರ ಸಹೋದರಿಯರು. 11 ನೇ ಆರೋಪಿಯು 2 ನೇ ಆರೋಪಿಯ ತಾಯಿಯಾಗಿರುತ್ತಾರೆ. 12 ರಿಂದ 16 ನೇ ಆರೋಪಿತರು 2 ನೇ ಆರೋಪಿಯ ಸಹೋದರ & ಸಹೋದರಿಯರಾಗಿರುತ್ತಾರೆ. 17 ನೇ ಆರೋಪಿತನು 12 ನೇ ಆರೋಪಿತನ ಗಂಡನಾಗಿರುತ್ತಾನೆ.

ದಿ.06.06.2012 ರಂದು ಪಿರ್ಯಾದಿ & 1 ನೇ ಆರೋಪಿಯ ವಿವಾಹವು ಹುಮನಾಬಾದ ಪಟ್ಟಣದ ಸೂಪರ ಪಂಕ್ಷನ ಹಾಲದಲ್ಲಿ ಹಿಂದು ಸಂಪ್ರದಾಯದ ಪ್ರಕಾರ ಮದುವೆಯಾಗಿರುತ್ತದೆ. ಮದುವೆಯಾದ ನಂತರ 1 ನೇ ಆರೋಪಿ & ಪಿರ್ಯಾದಿದಾರಳು ಬೀದರನಲ್ಲಿ ವಾಸವಿದ್ದರು. ಇಬ್ಬರ ಸಂಸಾರದಿಂದ ಪ್ರಜ್ವಲ ಎಂಬ ಮಗ ಜನಿಸಿರುತ್ತಾನೆ. 2013-14 ನೇ ಸಾಲಿನಲ್ಲಿ 1 ನೇ ಆರೋಪಿ & ಪಿರ್ಯಾದಿದಾರಳ ನಡುವೆ ಜಗಳ ಆಗಿರುತ್ತದೆ. 2018 ನೇ ಸಾಲಿನಿಂದ 1 ನೇ ಆರೋಪಿ & ಪಿರ್ಯಾದಿದಾರಳು ಪ್ರತ್ಯೇಕವಾಗಿ ಜೀವನ ಮಾಡುತ್ತಾ ಬಂದಿರುತ್ತಾರೆ.

ದಿ.08.07.2021 ರಂದು 1 ನೇ ಆರೋಪಿಯು 2 ನೇ ಆರೋಪಿಯೊಂದಿಗೆ ಡಾನಾ ಫಂಕ್ಷನಹಾಲ ಕಮಲ ನಗರದಲ್ಲಿ 2 ನೇ ಮದುವೆ ಮಾಡಿಕೊಂಡಿರುತ್ತಾನೆ. ಆ ಮದುವೆ ಸಮಯದಲ್ಲಿ ಆರೋಪಿತರೆಲ್ಲರೂ ಮದುವೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು . ನಾನು ಹಣ್ಣಿನ ವ್ಯಾಪಾರ ಮಾಡುತ್ತಿದ್ದು, ವ್ಯಾಪಾರ ಮಾಡುತ್ತಾ ಕಮಲನಗರಕ್ಕೆ ಹೋಗಿದ್ದೇನು ಆಗ ಅಲ್ಲಿ ಮದುವೆ ನಡೆದಿದ್ದನ್ನು ನೋಡಿ ನಾನು ಅಲ್ಲಿಗೆ ಹೋಗಿ 1 ನೇ ಆರೋಪಿತನನ್ನು ಈ ಮೊದಲೇ ನೀನು ಮದುವೆ ಆಗಿದ್ದಿಯಲ್ಲ ಎಂದು ಕೆಳಿದ್ದನು. ಆಗ ಅವರು ನಾನು ಮದುವೆ ಮಾಡಿಕೊಳ್ಳುತ್ತೇನೆ ಎಂದು ನೀನ್ಯಾರು ಕೇಳುವನು ಎಂದು ಹೇಳಿದನು. ಆ ದಿನ ನನ್ನ ಜೊತೆ ಸುನಿಲ ಎಂಬ ವ್ಯಕ್ತಿಯು ಸಹ ಬಂದಿದ್ದರು. 20 ದಿನಗಳ ನಂತರ ಸದರಿ ಮದುವೆ ವಿಷಯವನ್ನು ಪಿರ್ಯಾದಿದಾರರಿಗೆ ವಿಷಯವನ್ನು ತಿಳಿಸಿರುತ್ತೇನೆ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ.ಹೇ.ಕೇ.ಸ.ಅ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ,
ನ್ಯಾಯಿಕ ದಂಡಾಧಿಕಾರಿಗಳು, ಹುಮನಾಬಾದ.